# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038






| | | | | | | | |
|---|---|---|---|---|---|---|---|
| ಸಂಪುಟ:02 | ಸಂಚಿಕೆ: 97 | ಪಿ.ಆರ್.ಜಿ.ಐ.ನಂ.:KARKAN/2023/88055 | ವಿಜಯನಗರ | 11.10.2024 | ಶುಕ್ರವಾರ | ಪುಟ:04 | ಬೆಲೆ:2 |
| Volume:02 | Issue: 97 | PRGI No:KARKAN/2023/88055 | VIJAYANAGARA | 11.10.2024 | Friday | Page:04 | Rs:2 |




# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038




HAMPI TIMES
No.1 Leading Local News Paper
95,000
E-PAPER READERS
94486 33038
NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:02 • ಸಂಚಿಕೆ: 97 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 11.10.2024 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 97 • PRGI No:KARKAN/2023/88055 • VIJAYANAGARA • 11.10.2024 • Friday • Page:04 • Rs:2


# ದಸರಾ ಪರಂಪರೆಯ ಕೇಂದ್ರ ಧರ್ಮದ ಗುಡ್ಡ
# ಶಕ್ತಿ ದೇವತೆಗಳ ದಸರಾ ಮಹಾಮೇಳ

**ಮಹಾಲಯ ಅಮಾವಾಸ್ಯೆಯಿಂದ ವಿಜಯದಶಮಿಯವರಿಗೆ ಹೊಸಪೇಟೆಯಲ್ಲಿ ದಸರಾ ಆಚರಣೆ ಅತ್ಯಂತ ವಿಜ್ರಂಭಣೆಯಿಂದ ನೆರವೇರುತ್ತದೆ. ವಿಜಯನಗರದ ದಸರಾ ಉತ್ಸವ ಏಳು ಕೇರಿಗಳಲ್ಲಿ ಮತ್ತೆ ಮೇಳೈಯಿಸುತ್ತದೆ. ಇದನ್ನು ನೋಡಿ ಕಣ್ತುಂಬಿ ಕೊಳ್ಳುವುದು ಸೌಭಾಗ್ಯವೇ ಸರಿ. ಮೈಸೂರು ದಸರಾಕ್ಕೆ ಸಿಗುವಷ್ಟು ಪ್ರಚಾರ ನಮ್ಮ ಭಾಗದ ಪರಂಪರೆ ಆಚರಣೆಗಳಿಗೆ ಸಿಗದೇ ಇರುವುದು ದುರದೃಷ್ಟಕರ.**









ನಾಡಿನ ತುಂಬೆಲ್ಲ ದಸರಾ ಆಚರಣೆಯ ಸಂಭ್ರಮ ಮನೆ ಮಾಡಿದೆ. ಒಂಬತ್ತು ದಿನಗಳ ಆಚರಣೆಯಲ್ಲಿ ದೇವತೆಯ ಪೂಜೆ, ಆರಾಧನೆ ನಡೆಯುತ್ತಾ ಬಂದಿದೆ. ನವಮಿಯ ದಸರಾ ಆಚರಣೆ ಹಾಗೂ ದಶಮಿಯಂದು ವಿಜಯದಶಮಿ ಕಾರ್ಯಕ್ರಮಗಳು ನಡೆಯುತ್ತವೆ. ವಿಜಯನಗರ ಸಾಮ್ರಾಜ್ಯದಲ್ಲಿ ಈ ದಸರಾಚರಣೆ ಅತ್ಯಂತ ವೈಭವೋಪೇತವಾಗಿ ನಡೆಯುತ್ತಿತ್ತು ಎನ್ನುವುದು ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ. ಇದಕ್ಕೆ ಸಾಕ್ಷಿಯಾಗಿ ವಿಜಯನಗರ ಸಾಮ್ರಾಜ್ಯದ ಸಂದರ್ಭದಲ್ಲಿ ಭೇಟಿ ಕೊಟ್ಟ ವಿದೇಶಿ ಪ್ರವಾಸಿಗರು ದಾಖಲಿಸಿರುವ ಬರಹಗಳೇ ಸಾಕ್ಷಿಯಾಗಿವೆ. ಹಂಪಿಯಲ್ಲಿ ಈಗ ಅಂಥಹ ಯಾವುದೇ ಆಚರಣೆ ಇಲ್ಲದಿದ್ದರೂ, ಆದರೆ ಹಂಪಿ ಪ್ರದೇಶದ ನಾಗೇನಹಳ್ಳಿಯ ಧರ್ಮದ ಗುಡ್ಡದಲ್ಲಿ ಹೊಸಪೇಟೆ ಕಮಲಾಪುರ ಪ್ರದೇಶದ ವಾಲ್ಮೀಕಿ ನಾಯಕ ಸಮಾಜದವರು ಆಚರಿಸುತ್ತಾ ಬಂದಿರುವ ನಮ್ಮ ನೆಲದ ದಸರಾ ಪರಂಪರೆಯ ಆಚರಣೆ ಈಗಲೂ ವಿಜೃಂಭಣೆಯಿಂದ ನಡೆಯುತ್ತಿದೆ. ವಿಜಯನಗರ ಕಾಲದಿಂದಲೂ ಈ ಆಚರಣೆ ನಡೆದುಕೊಂಡು ಬಂದಿದೆ ಎನ್ನಲಾಗಿದೆ. ಕೃಷ್ಣದೇವರಾಯ ತನ್ನ ತಾಯಿಯ ನೆನಪಿಗಾಗಿ ಕಟ್ಟಿಸಿದ ನಾಗಲಾಪುರದಿಂದ ಹಾಗೂ ಪೌರಾಣಿಕವಾಗಿ ಪಾಂಡವರು ಈ ಗುಡ್ಡದಲ್ಲಿ ಇದ್ದರು ಎನ್ನುವ ನಂಬಿಕೆ ಆಚರಣೆಯಿಂದ ಈ ಗುಡ್ಡಕ್ಕೆ ಮಹತ್ವ ಬಂದಿದೆ. ಇಡೀ ಹೊಸಪೇಟೆಯ ಏಳು ಕೇರಿಗಳ ದೇವತೆಗಳು ಹಾಗೂ ಸುತ್ತಲಿನ ಗ್ರಾಮಗಳ ದೈವಗಳು ಪಲ್ಲಕ್ಕಿಗಳ ಮೂಲಕ ಬಂದು ಬನ್ನಿಮುಡಿಯುವುದನ್ನು ನೋಡಿದಾಗ, ಇಷ್ಟೊಂದು ಸಂಖ್ಯೆಯ ದೇವತೆಗಳು ಒಟ್ಟಿಗೆ ಒಂದೇ ಕಡೆ ಮೇಳೈಸಿ ಬನ್ನಿ ಮುಡಿಯುವುದು ಪ್ರಾಯಶಃ ಧರ್ಮದ ಗುಡ್ಡದಲ್ಲಿ ಮಾತ್ರ. ಅಪರೂಪದಲ್ಲಿ ಅಪರೂಪದ ಈ ತರಹದ ದಸರಾ ಆಚರಣೆ, ಪರಂಪರೆ ನಾಡಿನಲ್ಲಿ ಮತ್ತೇಲ್ಲೂ ಆಚರಿಸುವುದು ಕಂಡು ಬರುತ್ತಿಲ್ಲ. ಶಕ್ತಿ ದೇವತೆಗಳ ದಸರಾ ಮಹಾ ಮೇಳದಂತೆ ಧರ್ಮದ ಗುಡ್ಡದಲ್ಲಿ ಕಂಡು ಬರುತ್ತದೆ. ದಸರಾ ಆಚರಣೆಯ ಕುರಿತ ಮಾಹಿತಿ.

ಹಂಪಿ ಪ್ರದೇಶದ ಗುಡ್ಡ, ಪರ್ವತ, ಕಲ್ಲು ಬಂಡೆ, ಗವಿ, ತೀರ್ಥಗಳು ತಮ್ಮದೇ ಆದ ಪೌರಾಣಿಕ, ಧಾರ್ಮಿಕವಾಗಿ ಅಷ್ಟೇ ಅಲ್ಲ ಕೆಲವು ಚಾರಿತ್ರಿಕವಾಗಿಯು ಮಹತ್ವ ಪಡೆದುಕೊಂಡಿವೆ. ಮೊಸಳಯ್ಯನ ಗುಡ್ಡದಲ್ಲಿ ಆದಿಮಾನವ ನೆಲೆಸಿದ್ದ ಎನ್ನುವುದು ಚಾರಿತ್ರಿಕ ವಾದದ್ದು. ಅಲ್ಲಿ ಆದಿಮಾನವನ ಕುರುಹುಗಳು ಲಭಿಸಿವೆ. ಮಾತಂಗ ಮುನಿ ಬೃಹದ್ದೇಶಿ ಗ್ರಂಥವನ್ನು ಬರೆದಿದ್ದು ಮಾತಂಗ ಪರ್ವತದಲ್ಲಿ ಇವು ಚರಿತ್ರೆಯನ್ನು ಹೊಂದಿವೆ. ಇನ್ನು ಧಾರ್ಮಿಕವಾಗಿ ಹೇಮಕೋಟದಲ್ಲಿ ಪಾರ್ವತಿಯ ತಪಸ್ಸಿನಿಂದ ಶಿವಪ್ರತ್ಯಕ್ಷನಾಗಿ ಶಿವ ಪಾರ್ವತಿಯ ಗಿರಿಜಾ ಕಲ್ಯಾಣ ನಡೆದಿದ್ದು ಈ ಹೇಮಕೂಟದಲ್ಲಿ. ಹಾಗೂ ಮಾಲ್ಯವಂತದಲ್ಲೇ ಶ್ರೀರಾಮ ತಂಗಿದ್ದ ಎಂಬ ನಂಬಿಕೆ. ಹೀಗೇ ಇಲ್ಲಿಯ ಪರ್ವತಗಳು, ಗುಡ್ಡಗಳಿಗೆ ಒಂದೊಂದು ಚರಿತ್ರೆ, ಪೌರಾಣಿಕ ನಂಬಿಕೆ, ಐತಿಹ್ಯಗಳಿವೆ, ಇಂಥಹ ಪೌರಾಣಿಕ ನಂಬಿಕೆ, ಐತಿಹ್ಯದ ಸಾಲಿನಲ್ಲಿ ಬಸವನದುರ್ಗ ನಾಗೇನಹಳ್ಳಿ ಬಳಿಯ ಧರ್ಮದ ಗುಡ್ಡದಲ್ಲಿ ಪಾಂಡವರು ಬಂದು ತಂಗಿ ಹೋಗಿದ್ದರು ಎಂಬ ನಂಬಿಕೆ ಹೀಗಾಗಿ ಪೌರಾಣಿಕವಾಗಿ ಧಾರ್ಮಿಕ ನಂಬಿಕೆ ಪರಂಪರೆಯ ಗುಡ್ಡವಾಗಿದೆ.



ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489

Scan For Digital Colourful
HAMPI TIMES E-paper

ಮಹಾಭಾರತದ ಕಥೆಯಲ್ಲಿ ಪಾಂಡವರು ವನವಾಸವನ್ನು ಅನುಭವಿಸಿದ್ದನ್ನು ಕೇಳಿದ್ದೇವೆ. ಇವರು ವನವಾಸವನ್ನು ಅನುಭವಿಸುವ ಸಂದರ್ಭದಲ್ಲಿ ಈ ಪ್ರದೇಶಕ್ಕೂ ಬಂದಿದ್ದವರು. ಹೀಗೆ ಬಂದಾಗ ಧರ್ಮದ ಗುಡ್ಡಕ್ಕೂ ಬಂದು ಕೆಲಕಾಲ ತಂಗಿ ಹೋಗಿದ್ದರು ಎಂಬ ನಂಬಿಕೆ ಇದೆ. ಈ ಸಂದರ್ಭದಲ್ಲಿ ಇಲ್ಲಿ ಹರಿಯುತ್ತಿದ್ದ ಹೊಳೆಯನ್ನು ದಾಟಿ ಆಚೆ ಹೋಗುವ ಸಂದರ್ಭದಲ್ಲಿ ಅದು ಬೃಹತ್ ಪ್ರಮಾಣದಲ್ಲಿ ತುಂಬಿ ಹರಿಯುತ್ತಿತ್ತಂತೆ, ಆಗ ಅದನ್ನು ದಾಟಿ ಹೋಗಲು ಅಸಾಧ್ಯವಾದಾಗ ಅರ್ಜುನ ಭೀಮ ಮೊದಲಾದವರು ನದಿಯ ಕೆಳಗಡೆ ಇಲ್ಲಿಂದ ಸುರಂಗ ಮಾರ್ಗವನ್ನು ಕೊರೆದು ಆಚೆ ದಡಕ್ಕೆ ಹೋದರು ಎನ್ನುವುದು ವಾಡಿಕೆ ಇದೆ. ಈ ಸಂದರ್ಭದಲ್ಲಿ ಧರ್ಮರಾಯನ ಸಮೇತ ಅರ್ಜುನ, ಭೀಮ ಮೊದಲಾದ ಪಾಂಡವರು ಇಲ್ಲಿ ತಂಗಿದ್ದರಿಂದ ಈ ಗುಡ್ಡವನ್ನು ಅತ್ಯಂತ ಭಕ್ತಿ ಗೌರವಗಳಿಂದ ನೋಡಿಕೊಂಡು ಬರಲಾಗುತ್ತಿದೆ. ಇಲ್ಲಿ ಧರ್ಮರಾಯ ಮತ್ತು ಆತನ ಸಹೋದರರು ಉಳಿದುಕೊಂಡಿದ್ದರಿಂದ ಇದನ್ನು ಧರ್ಮರ ಗುಡ್ಡ ಅಥವಾ ಧರ್ಮದ ಗುಡ್ಡ ಎಂದು ಕರೆಯಲಾಗುತ್ತಿದೆ.

ವಿಜಯನಗರ ಸಾಮ್ರಾಜ್ಯದ ಅರಸ ಕೃಷ್ಣದೇವರಾಯ ತನ್ನ ತಾಯಿ ನಾಗಲಾದೇವಿಯವರ ನೆನಪಿಗಾಗಿ ನಾಗಲಾಪುರ ವನ್ನು ನಿರ್ಮಿಸಿದ್ದನು. ಅದೇ ಇಂದಿನ ನಾಗೇನಹಳ್ಳಿ. ಇದಕ್ಕೆ ಚಾರಿತ್ರಿಕ ದಾಖಲೆಗಳಿವೆ. ಕೃಷ್ಣದೇವರಾಯ ತನ್ನ ತಾಯಿಯ ಹೆಸರಿನಲ್ಲಿ ನಿರ್ಮಿಸಿದ ಈ ಗ್ರಾಮದಲ್ಲಿ ಅನೇಕ ಧರ್ಮದ ಕಾರ್ಯಗಳನ್ನು ನೆರವೇರಿಸಿದ್ದಾನೆ. ಬಡವರಿಗೆ ಬಟ್ಟೆ, ದವಸ, ಧಾನ್ಯ ಮೊದಲಾದವುಗಳನ್ನು ದಾನ ಮಾಡಿದ್ದಾನೆ. ದಾನ ದತ್ತಿಗಳನ್ನು ಸಹ ಕೊಡಮಾಡಿದ್ದಾನೆ. ಅಗ್ರಹಾರವನ್ನೂ ಸಹ ನಿರ್ಮಿಸಲಾಗಿತ್ತು. ರಂಗನಾಥ ದೀಕ್ಷಿತರು ಇಲ್ಲಿ ರಂಗನಾಥ ದೇವಾಲಯ, ನಾಗಸಮುದ್ರ ಎಂಬ ಕೆರೆಯನ್ನು ಸಹ ನಿರ್ಮಿಸಿದ್ದರು. ಹೀಗೆ ನಾಗೇನಹಳ್ಳಿ ಪ್ರದೇಶಕ್ಕೆ ಚಾರಿತ್ರಿಕ, ಧಾರ್ಮಿಕ ಮಹತ್ವವಿದೆ. ಈ ಪ್ರದೇಶದ ಬಸವನದುರ್ಗ(ಓಬಳಾಪುರ) ಧರ್ಮ ಗುಡ್ಡದ ಪ್ರದೇಶದಲ್ಲಿ ನಡೆಯುವ ದಸರಾ ಆಚರಣೆಯನ್ನು ಹೊಸಪೇಟೆ ಕಮಲಾಪುರದ ವಾಲ್ಮೀಕಿ ನಾಯಕ ಸಮಾಜದವರು ಅತ್ಯಂತ ಭಕ್ತಿ, ಶ್ರದ್ಧೆ, ಉತ್ಸಾಹ, ಸಡಗರದಿಂದ ಹಾಗೂ ಪರಂಪರೆಯಿಂದ ಬಂದ ಆಚರಣೆಯನ್ನು ಚಾಚು ತಪ್ಪದೆ ಈ ಕಾಲಘಟ್ಟದಲ್ಲಿಯು ಆಚರಿಸಿಕೊಂಡು ಬರುತ್ತಿರುವುದು ಅತ್ಯಂತ ಹೆಮ್ಮೆಯ ಹಾಗೂ ಪರಂಪರೆಯನ್ನು ಮುಂದಿನ ತಲೆಮಾರಿಗೆ ಉಳಿಸುವ ಶ್ರೇಷ್ಠವಾದ ಕಾರ್ಯವಾಗಿದೆ. ಹೊಸಪೇಟೆ, ನಾಗೇನಹಳ್ಳಿ, ನರಸಾಪುರ ಮಾಗಾಣಿ, ಮಲಪನಗುಡಿ, ಕೊಂಡ ನಾಯಕನಹಳ್ಳಿ, ಕಮಲಾಪುರ ಮೊದಲಾದ ಗ್ರಾಮದಿಂದ ಬರುವ ದೇವತೆಗಳೇ ಇಲ್ಲಿ ದೇವರ ಬನ್ನಿ ಮುಡಿಯುವುದು ವಿಶಿಷ್ಟ ಸಂಪ್ರದಾಯವಾಗಿದೆ.

ಧರ್ಮದ ಗುಡ್ಡದಲ್ಲಿ ಚನ್ನಬಸವೇಶ್ವರ ಹಾಗೂ ನಿಜಲಿಂಗಮ್ಮ ಇವರುಗಳು ನೆಲೆಸಿದ್ದ ಸ್ಥಳವೆಂಬುದು ಜನರ ನಂಬಿಕೆ. ಈ ಸ್ಥಳದಲ್ಲಿ ಈ ದೇವತೆಗಳ ಬನ್ನಿ ಮುಡಿಯುವ ಕಾರ್ಯ ನೆರವೇರುತ್ತದೆ. ವಿಜಯದಶಮಿಯ ಸಂದರ್ಭದಲ್ಲಿ ಬನ್ನಿ ಮಡಿಯುವುದು ಎಲ್ಲಾ ಕಡೆ ಸಾಮಾನ್ಯವಾಗಿ ನಡೆಯುವ ಆಚರಣೆ ಆದರೆ ಧರ್ಮದ ಗುಡ್ಡದಲ್ಲಿ ನವಮಿ ದಿನವೇ ಅಂದರೆ ಆಯುಧ ಪೂಜೆ ದಿನವೇ ಈ ಭಾಗದ ವಾಲ್ಮೀಕಿ ನಾಯಕ ಸಮಾಜದ ಪರಂಪರೆಯಿಂದ ಬಂದ ಆಚರಣೆಯಂತೆ ನವಮಿ ದಿನವೇ ಗುಡ್ಡದಲ್ಲಿ ದೇವರ ಬನ್ನಿಮುಡಿಯಲಾಗುತ್ತಿದೆ. ಮಹಾಲಯ ಅಮಾವಾಸ್ಯೆಯಿಂದ ಪ್ರಾರಂಭವಾಗುವ ಆಚರಣೆಗಳು, ದೇವತೆಗಳ ಗಂಗಾ ಪೂಜೆಯೊಂದಿಗೆ ದಸರಾ ಹಬ್ಬವನ್ನು ಪ್ರಾರಂಭಿಸಲಾಗುತ್ತದೆ. ಪ್ರತಿದಿನವೂ ದೇವತೆಗಳ ಪೂಜೆ ಆರಾಧನೆ ನಡೆದು ನವಮಿ ದಿನದಂದು ಈ ದೇವತೆಗಳು ಧರ್ಮದ ಗುಡ್ಡಕ್ಕೆ ಪಲ್ಲಕ್ಕಿ ಮೂಲಕ ಆಗಮಿಸುತ್ತವೆ.

ಬಸವನ ದುರ್ಗದ ಚನ್ನಬಸವೇಶ್ವರ, ನಾಗೇನಹಳ್ಳಿ ಹುಲಿಗೆಮ್ಮ, ಹರಿಜನಕೇರಿ ಹುಲಿಗೆಮ್ಮ, ನರಸಾಪುರ ಮಾಗಾಣಿಯ ಹಾಲಮ್ಮ, ಹೊಸಪೇಟೆ ಬಾಣದಕೇರಿ ನಿಜಲಿಂಗಮ್ಮ, ತಳವಾರ ಕೇರಿ ರಾಂಪುರ ದುರ್ಗಮ್ಮ, ಚಿತ್ತವಾಡಗಿ ವರಕೇರಿ ನಿಜಲಿಂಗಮ್ಮ, ಉಕ್ಕಡಕೇರಿ ಹುಲಿಗೆಮ್ಮ, ಹರಿಜನಕೇರಿ ಮಾಯಮ್ಮ, ರಾಂಪುರ ದುರ್ಗಮ್ಮ, ಜಂಬುನಾಥ ರಸ್ತೆ ಹುಲಿಗೆಮ್ಮ, 5ನೇ ವಾರ್ಡಿನ ಕೆಂಚಮ್ಮ, ಅನಂತಶಯನ ಗುಡಿಯ ದುರ್ಗಮ್ಮ, ಚಲವಾದಿಕೇರಿ ಎಲ್ಲಮ್ಮ, ಕೊಂಡನಾಯಕನಹಳ್ಳಿಯ ದುರ್ಗಮ್ಮ, ಕಮಲಾಪುರದ ನಿಜಲಿಂಗಮ್ಮ, ನೆರಗಲಮ್ಮ, ಬಂಡಿಕೇರಿ ಹುಲಿಗೆಮ್ಮ , ತಿಮ್ಮನಾಥ ಕೇರಿ ತಾಯಮ್ಮ ಮೊದಲಾದ ದೇವತೆಗಳನ್ನು ಪಲ್ಲಕ್ಕಿ ಯಲ್ಲಿ ಕರೆತಂದು ಬನ್ನಿ ಮುಡಿಯುವ ಕಾರ್ಯ ನೆರವೇರುತ್ತದೆ.

ಈ ಸಂದರ್ಭದಲ್ಲಿ ಧರ್ಮದ ಗುಡ್ಡದ ಪ್ರದೇಶದಲ್ಲಿ ಸೇರುವ ಜನಸಾಗರವನ್ನು ನೋಡಿದರೆ ಇದು ಮಿನಿ ಮೈಸೂರು ದಸರಾದಂತೆ ಭಾಸವಾಗುತ್ತದೆ. ಈ ದೇವರ ಪಲ್ಲಕ್ಕಿಗಳು ಗುಡ್ಡದ ಮೇಲಿನ ಶ್ರೀ ಚನ್ನಬಸವೇಶ್ವರಸ್ವಾಮಿ ದರ್ಶನ ಪಡೆದು ಪೂಜೆಗೈದು, ಬನ್ನಿಮರಕ್ಕೆ ಪ್ರದಕ್ಷಿಣೆ ಹಾಕಿ ಬನ್ನಿಮುಡಿದ ನಂತರ ಹೊಸಪೇಟೆ ನಗರಕ್ಕೆ ಆಗಮಿಸುತ್ತವೆ. ಈ ಪಲ್ಲಕ್ಕಿಗಳನ್ನು ಹೊತ್ತು, ಭಕ್ತರು ಓಡಿ ಬರುವ ದೃಶ್ಯ ರೋಮಾಂಚನ ವಾಗಿರುತ್ತದೆ. ಬನ್ನಿ ಮುಡಿದು ಬರುವ ದೇವತೆಗಳನ್ನು ಅವರವರ ಕೇರಿಗಳಿಗೆ ಭಾಜ ಭಜಂತ್ರಿ ಡೊಳ್ಳು, ಕೋಲಾಟ, ಮೊದಲಾದ ಮೇಳಗಳಿಂದ ಸ್ವಾಗತಿಸುತ್ತಾರೆ. ಈ ಸಂದರ್ಭದಲ್ಲಿ ಧರ್ಮದಗುಡ್ಡ ಮತ್ತು ಪಲ್ಲಕ್ಕಿಗಳು ಸಾಗುವ ಹೊಸಪೇಟೆ ರಸ್ತೆಗಳಲ್ಲಿ ಭಕ್ತಸಾಗರವನ್ನು ಕಣ್ತುಂಬಿಕೊಳ್ಳುವುದೇ ಸೌಭಾಗ್ಯ. ■

## ಬಿಡುವು



ಸಮಸ್ತ ಓದುಗರಿಗೆ, ಲೇಖಕರಿಗೆ, ಜಾಹೀರಾತುದಾರರಿಗೆ, ಪತ್ರಿಕಾ ವಿತರಕರಿಗೆ ಹಾಗೂ ಹಿತೈಷಿಗಳಿಗೆ ವಿಜಯ ದಶಮಿ ಹಬ್ಬದ ಹಾರ್ದಿಕ ಶುಭಾಶಯಗಳು
ವಿಜಯ ದಶಮಿ ನಿಮಿತ್ತ ಅ.11 ರಂದು ಕಚೇರಿಗೆ ಬಿಡುವು ಇದ್ದು, ಅ.12ರ ಪ್ರಕಟಣೆ ಇರುವುದಿಲ್ಲ.

– ಸಂಪಾದಕರು


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com



## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.


# ಕಾಂತರಾಜ್ ವರದಿ ಮಂಡನೆ ಕೈಬಿಡಿ

## ಅ.ಭಾ.ವೀ.ಲಿಂಗಾಯತ ಮಹಾಸಭಾ ಆಗ್ರಹ । ನಿರ್ಲಕ್ಷಿಸಿದರೆ ಹೋರಾಟಕ್ಕೂ ಸಿದ್ಧ



■ **ಹಂಪಿ ಟೈಮ್ಸ್ ಹೊಸಪೇಟೆ**

ಮುಂಬರುವ ಸಚಿವ ಸಂಪುಟದಲ್ಲಿ ಕಾಂತರಾಜ್ ವರದಿಮಂಡನೆಮತ್ತುಅನುಷ್ಠಾನಗೊಳಿಸುವುದನ್ನು ಸರ್ಕಾರ ಕೈಬಿಡಬೇಕೆಂದು ಒತ್ತಾಯಿಸಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವಿಜಯನಗರ ಜಿಲ್ಲಾ ಘಟಕ ಜಿಲ್ಲಾಧಿಕಾರಿಗಳ ಮೂಲಕ ಸಿಎಂಗೆ ಗುರುವಾರ ಮನವಿ ಸಲ್ಲಿಸಿತು.

ಘಟಕದ ಜಿಲ್ಲಾಧ್ಯಕ್ಷ ಐ.ಎನ್. ಸಂಗನಬಸಪ್ಪ ಮಾತನಾಡಿ, ದಶಕಗಳ ಹಿಂದೆ ಅವೈಜ್ಞಾನಿಕವಾಗಿ ಜಾತಿ ಜನಗಣತಿ ನಡೆಸಿ ಸರ್ಕಾರಕ್ಕೆ ಸಲ್ಲಿಸಿದ ಕಾಂತರಾಜ್ ಅವರ ವರದಿಯನ್ನು ಅ.18ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಮುಂಡಿಸಿ ಅನುಷ್ಠಾನಗೊಳಿಸಲು ಹೊರಟಿರುವ ಸರ್ಕಾರ ನಡೆ ಖಂಡನೀಯ. ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾದ ಶಾಮನೂರ್ ಶಿವಶಂಕರಪ್ಪನವರು ಹಾಗೂ ರಾಜ್ಯಾಧ್ಯಕ್ಷ ಶಂಕರ್‌ಬಿದರಿ ವಿರೋಧ ವ್ಯಕ್ತಪಡಿಸಿದ್ದಾರೆ. ಅವೈಜ್ಞಾನಿಕ ವರದಿಗೆ ಹರ–ಚರಪೂಜ್ಯರು ಸೇರಿದಂತೆ ಸಮಾಜದಿಂದಲೂ ವಿರೋಧ ವ್ಯಕ್ತವಾಗಿದೆ. ಮನವಿ ನಿರ್ಲಕ್ಷ್ಯಿಸಿ ಸಚಿವ ಸಂಪುಟದಲ್ಲಿ ವರದಿ ಮಂಡಿಸಲು ಮುಂದಾದರೆ, ಜಿಲ್ಲಾ, ತಾಲೂಕು ಮಟ್ಟದಿಂದ ಬೃಹತ್ ಹೋರಾಟ ಹಮ್ಮಿಕೊಳ್ಳ ಲಾಗುವುದು ಎಂದರು.

ಸಮಾಜದ ಮುಖಂಡ ಗೊಗ್ಗ ಚನ್ನಬಸವರಾಜ, ಕೆ.ಕೊಟ್ರೇಶ, ಕೋರಿಶೆಟ್ಟಿ ಲಿಂಗಪ್ಪ, ನಾಗೇನಹಳ್ಳಿ ಚಂದ್ರಶೇಖರ, ಎಲ್. ಬಸವರಾಜ, ತಿಪ್ಪೇಸ್ವಾಮಿ, ಬಿ.ಎಂ.ಸೋಮ ಶೇಖರ, ಕೊಟ್ರೇಶ ಕಿಚಿಡಿ, ಎನ್.ಮಲ್ಲಿಕಾರ್ಜುನ ಮೆಟ್ರಿ, ಅಶ್ವಿನ್ ಕೋತಂಬ್ರಿ, ರವಿಕಾಂತ, ಎನ್.ಎಸ್. ರೇವಣಸಿದ್ದಪ್ಪ, ಡಿ.ಶಶಿಕಲಾ ಸೇರಿದಂತೆ ಇತರರು ಇದ್ದರು.



ಹೊಸಪೇಟೆ ಅಮರಾವತಿಯ ಶ್ರೀ ಬನ್ನಿ ಮಹಾಂಕಾಳಿ ದೇವಿಗೆ ಅಷ್ಟಮಿ ಗುರುವಾರ ಭಕ್ತಾದಿಗಳಿಂದ ವಿಶೇಷ ಪೂಜೆ ಮತ್ತು ಅಲಂಕಾರ ನೆರವೇರಿತು ಭಕ್ತರಿಂದ ಅನ್ನ ಸಂತರ್ಪಣೆ ನಡೆಯಿತು


Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038

ಕನ್ನಡ ದಿನಪತ್ರಿಕೆ
KANNADA DAILY



HAMPI TIMES No.1 Leading Local News Paper
95,000 E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:02 Volume:02 • ಸಂಚಿಕೆ: 97 Issue: 97 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 11.10.2024 • ಶುಕ್ರವಾರ Friday • ಪುಟ:04 Page:04 • ಬೆಲೆ:2 Rs:2






ನಾಡಿನ ಸಮಸ್ತ ಜನತೆಗೆ

# ದಸರಾ ಹಬ್ಬದ ಹಾರ್ದಿಕ ಶುಭಾಶಯಗಳು

# ಶ್ರೀಚನ್ನಬಸವೇಶ್ವರಸ್ವಾಮಿ ಧರ್ಮದ ಗುಡ್ಡದಲ್ಲಿ ಶಕ್ತಿ ದೇವತೆಗಳ ಸಮ್ಮಿಲನ





ಯಾ ದೇವೀ ಸರ್ವಭೂತೇಷು ಶಕ್ತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥

ಸತ್ಯದ ಗೆಲುವು, ಅಸತ್ಯದ ನಾಶ, ಯಶಸ್ಸು, ಆರೋಗ್ಯ, ಸಮೃದ್ಧಿ ನಮ್ಮೆಲ್ಲರ ಜೀವನದಲ್ಲಿ ನೆಲೆಸಲಿ. ಎಲ್ಲಾ ಭಕ್ತರಿಗೆ ದಸರಾ ಹಬ್ಬದ ಹಾರ್ದಿಕ ಶುಭಾಶಯಗಳು








ದಿನಾಂಕ: 11-10-2024, ಶುಕ್ರವಾರ
ಸ್ಥಳ: ಧರ್ಮದ ಗುಡ್ಡ, ಬಸವನದುರ್ಗ, (ಗುಡಿ ಓಬಳಾಪುರ) ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ



ಶ್ರೀ ಎಂ.ದುರುಗಪ್ಪ
ಅಧ್ಯಕ್ಷರು, ನಾಗೇನಹಳ್ಳಿ ಗ್ರಾ.ಪಂ



ಶ್ರೀಮತಿ ಟಿ.ಸವಿತಾ
ಉಪಾಧ್ಯಕ್ಷರು, ನಾಗೇನಹಳ್ಳಿ ಗ್ರಾ.ಪಂ






-: ಸರ್ವರಿಗೂ ಸ್ವಾಗತ ಹಾಗೂ ಶುಭ ಕೋರುವವರು :-

## ನಾಗೇನಹಳ್ಳಿ ಗ್ರಾಮ ಪಂಚಾಯತಿ, ಹೊಸಪೇಟೆ ತಾ., ವಿಜಯನಗರ ಜಿಲ್ಲೆ

## ಆನಂದ ಬಾಣ




## ನಿತ್ಯ ಪಂಚಾಂಗ

ಮಾಸ: ಆಶ್ವೀಜ । ಸಂವತ್ಸರ: ಕ್ರೋಧಿ

**11–10–2024 – ಶುಕ್ರವಾರ**

| | |
|---|---|
| ತಿಥಿ | : ನವಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಶ್ರಾವಣ |
| ಯೋಗ | : ಧೃತಿ |
| ಕರಣ | : ಕೌಳವ |
| ಸೂರ್ಯೋದಯ | : 06:23:23 |
| ಸೂರ್ಯಾಸ್ತ | : 18:03:21 |
| ರಾಹು ಕಾಲ | : 10:46–12:13 |
| ಯಮಘಂಡ ಕಾಲ | : 10:08–16:36 |
| ಗುಳಿಕ ಕಾಲ | : 07:51–09:18 |

## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 10–10–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.92 ಅಡಿ |
| ಒಳ ಹರಿವು | 11784 ಕ್ಯುಸೆಕ್ |
| ಹೊರ ಹರಿವು | 14981 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.461 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1615.71 ಅಡಿ |
| ಒಳ ಹರಿವು | 1374 ಕ್ಯುಸೆಕ್ |
| ಹೊರ ಹರಿವು | 9384 ಕ್ಯುಸೆಕ್ |
| ಸಾಮರ್ಥ್ಯ | 50.122 ಟಿಎಂಸಿ |

# ಗಾಂಧೀಯ ಬದುಕೇ ಸಂದೇಶ

**ಮಹಾತ್ಮ ಗಾಂಧೀಜಿ ಜಯಂತಿ ವಿಶೇಷ ಕಾರ್ಯಕ್ರಮ । ಸಚಿವ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಚಾಲನೆ**

**ಬಾಪೂಜಿ ಪ್ರಬಂಧ ಸ್ಪರ್ಧೆ ವಿಜೇತರಿಗೆ 3000 ರೂ., 2000 ರೂ. 1000 ರೂ. ನಗದು ಬಹುಮಾನ**

**ಡಾ.ದಯಾನಂದ ಕಿನ್ನಾಳರಿಂದ ಉಪನ್ಯಾಸ । ಖಾದಿ ವಸ್ತುಗಳ ಪ್ರದರ್ಶನ । ಗಾಂಧಿಪ್ರಿಯ ಭಜನೆಗಳ ಗಾಯನ**

**■ ಹಂಪಿ ಟೈಮ್ಸ್ ಹೊಸಪೇಟೆ**

ಮಹಾತ್ಮ ಗಾಂಧೀಜಿಯವರು ಬರೀ ವ್ಯಕ್ತಿಯಾಗಿರದೇ ಒಂದು ಶಕ್ತಿಯಾಗಿದ್ದರು. ನನ್ನ ಬದುಕೇ ನನ್ನ ಸಂದೇಶ ಎಂದು ನುಡಿದಂತೆ ನಡೆದರು. ಜಗತ್ತಿಗೆ ಮಾದರಿಯಾಗಿ ಬಾಳಿದರು ಎಂದು ಬಾಲಕೀಯರ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಡಾ.ದಯಾನಂದ ಕಿನ್ನಾಳ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ನಗರಸಭೆ ಹಾಗೂ ಜಿಲ್ಲಾ ಖಾದಿ ಗ್ರಾಮೋದ್ಯೋಗ ಮಂಡಳಿ ಇವರಿಂದ ನಗರದ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 155ನೇ ಜಯಂತಿ ಹಿನ್ನೆಲೆಯಲ್ಲಿ ಹಮ್ಮಿಕೊಂಡಿದ್ದ ವಿಶೇಷ ಕಾರ್ಯಕ್ರಮದಲ್ಲಿ ಗುರುವಾರ ಮಾತನಾಡಿದರು. ಮಹಾತ್ಮ ಗಾಂಧೀಜಿಯವರು ಈ ಜಗತ್ತು ಕಂಡ ಅದ್ಭುತ ವ್ಯಕ್ತಿತ್ವ. ಹೋರಾಟಗಾರರಾಗಿ, ರಾಜಕೀಯ ಮುತ್ಸದ್ಧಿಯಾಗಿ, ಪತ್ರಕರ್ತರಾಗಿ, ಲೇಖಕರಾಗಿ ಕೆಲಸ ಮಾಡಿರುವುದು ಅವರ ವ್ಯಕ್ತಿತ್ವ ಹಿರಿದಾಗಿರುವುದಕ್ಕೆ ಸಾಕ್ಷಿಯಾಗಿದೆ. ಯಾರಾದರು ತಪ್ಪು ಮಾಡಿದರೆ ಅದನ್ನು ಕ್ಷಮಿಸುವ ಗುಣವೇ ಅಹಿಂಸೆ ಎಂಬುದಾಗಿ ಗಾಂಧೀಜಿ ಯವರು ಪ್ರತಿಪಾದಿಸಿದರು. ಎಲ್ಲ ಧರ್ಮಗಳ ಸಾರಾಂಶ ಒಂದೇ ಎಂದು ಸಂದೇಶ ನೀಡಿದರು ಎಂದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಗವಿಸಿದ್ದಪ್ಪ ಹೊಸಮನಿ ಪ್ರಾಸ್ತಾವಿಕ ಮಾತನಾಡಿ, ಮಹಾತ್ಮ ಗಾಂಧೀಜಿ ಯವರ ಜಯಂತ್ಯುತ್ಸವ ಹಿನ್ನೆಲೆಯಲ್ಲಿ ನಡೆಸಿದ ಹೋರಾಟಗಳು, ಅವರ ಬದುಕು, ಸಾಧನೆಯ ಬಗ್ಗೆ ವಿದ್ಯಾರ್ಥಿ ಯುವಜನರಿಗೆ ತಿಳಿಸಲು, ಜನರಲ್ಲಿ ಜಾಗೃತಿ ಮೂಡಿಸಲು ವಿಜಯನಗರ ಜಿಲ್ಲೆಯಲ್ಲಿ ಬಾಪೂಜಿ ಪ್ರಬಂಧ ಸ್ಪರ್ಧೆಯನ್ನು ಆಯೋಜನೆ ಮಾಡಲಾಗಿತ್ತು. ಜೊತೆಗೆ ಗಾಂಧೀಜಿವರಿಗೆ ಅತ್ಯಂತ ಪ್ರಿಯವಾಗಿದ್ದ ಭಜನೆಗಳ ಗಾಯನ, ಸರ್ವಧರ್ಮ ಪ್ರಾರ್ಥನೆಗೆ ಏರ್ಪಾಡು ಮಾಡಲಾಗಿದೆ. ಖಾದಿ ಬಗ್ಗೆ ಜನರಿಗೆ ಜಾಗೃತಿ ಮೂಡಿಸಲು ಜಿಲ್ಲಾ ಖಾದಿ ಗ್ರಾಮೋದ್ಯೋಗ ಮಂಡಳಿಯಿಂದ ಖಾದಿ ವಸ್ತುಗಳ ಪ್ರದರ್ಶನಕ್ಕೆ ಸಹ ಏರ್ಪಾಡು ಮಾಡಲಾಗಿದೆ ಎಂದು ತಿಳಿಸಿದರು.



**ಹೊಸಪೇಟೆಯಲ್ಲಿ ಗುರುವಾರ ನಡೆದ ವಿಶೇಷ ಕಾರ್ಯಕ್ರಮ ಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಚಾಲನೆ ನೀಡಿದರು.**

**ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ:** ಪ್ರೌಢಶಾಲೆ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ಕೊಟ್ಟೂರು ತಾಲ್ಲೂಕಿನ ಪಿ.ಭರತ್‌ಕುಮಾರ್‌ಗೆ, ದ್ವಿತೀಯ ಸ್ಥಾನ ಪಡೆದ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ವೀಣಾ. ಹೆಚ್ ಅವರಿಗೆ ಮತ್ತು ತೃತೀಯ ಸ್ಥಾನ ಪಡೆದ ಹರಪನಹಳ್ಳಿ ತಾಲ್ಲೂಕಿನ ಕೆ.ಉಷಾ ಅವರಿಗೆ ಬಹುಮಾನ ನೀಡಲಾಯಿತು. ಪದವಿ ಪೂರ್ವ ಶಿಕ್ಷಣ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ಕೊಟ್ಟೂರಿನ ಭವಾನಿ.ಎಂ ಅವರಿಗೆ, ದ್ವಿತೀಯ ಸ್ಥಾನ ಪಡೆದ ಹೂವಿನಹಡಗಲಿ ತಾಲ್ಲೂಕಿನ ರಿಯಾನಾ ಪಿಂಜಾರಗೆ ಮತ್ತು ತೃತೀಯ ಸ್ಥಾನ ಪಡೆದ ಮರಿಯಮ್ಮನಹಳ್ಳಿಯ ಅಕ್ಷತಾ ಅವರಿಗೆ ಬಹುಮಾನ ನೀಡಲಾಯಿತು. ಪದವಿ–ಸ್ನಾತಕೋತ್ತರ ಪದವಿ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರವೀಣ್ ನಿಂಗಪ್ಪ ಕಿತ್ತೂರಗೆ, ದ್ವಿತೀಯ ಸ್ಥಾನ ಪಡೆದ ಹೊಸಪೇಟೆಯ ಬಿ.ಕಲ್ಪನಾ ಅವರಿಗೆ ಮತ್ತು ತೃತೀಯ ಸ್ಥಾನ ಪಡೆದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಶೀತಲ್ ಬೇಕ್ವಾಡಕರ್ ಅವರಿಗೆ ಕ್ರಮವಾಗಿ ಪ್ರಥಮ ಬಹುಮಾನ 3000 ರೂ., ದ್ವಿತೀಯ ಬಹುಮಾನ 2000 ರೂ. ಮತ್ತು ತೃತೀಯ ಬಹುಮಾನ 1000 ರೂ. ನಗದು ಬಹುಮಾನದ ಜೊತೆಗೆ ಪ್ರಮಾಣ ಪತ್ರ, ಶಾಲುಹೊದಿಸಿ, ಫಲಪುಷ್ಪ ನೀಡಿ ಸನ್ಮಾನಿಸಿ. ಗೌರವಿಸಲಾಯಿತು.

**ಗಾಂಧಿಪ್ರಿಯ ಭಜನೆಗಳ ಗಾಯನ:** ವಿಜಯನಗರ ಜಿಲ್ಲೆಯ ಕಲಾವಿದರಾದ ಮಲ್ಲಿಕಾರ್ಜುನ ಟಿ. ತುರುವನೂರ ಹಾಗೂ ತಂಡದವರು ಇದೆ ವೇಳೆ ಗಾಂಧಿಪ್ರಿಯ ಭಜನೆಗಳ ಗಾಯನ, ಸರ್ವಧರ್ಮ ಪ್ರಾರ್ಥನೆ ಮತ್ತು ನಾಡಗೀತೆ ನಡೆಸಿಕೊಟ್ಟರು.

**ಖಾದಿ ವಸ್ತುಗಳ ಪ್ರದರ್ಶನ:** ಸ್ವದೇಶಿ ವಸ್ತುಗಳ ಬಳಕೆಯ ಗಾಂಧೀಜಿಯವರ ಮಹತ್ವದ ಸಂದೇಶದ ಖಾದಿ ವಸ್ತುಗಳ ಪ್ರದರ್ಶನಕ್ಕೆ ಸಹ ಕಾರ್ಯಕ್ರಮದಲ್ಲಿ ವಿಶೇಷ ಏರ್ಪಾಡು ಮಾಡಲಾಗಿತ್ತು. ಜಿಲ್ಲಾ ಖಾದಿ ಗ್ರಾಮೋದ್ಯೋಗ ಮಂಡಳಿ ಬಳ್ಳಾರಿ ಇವರ ಸಹಯೋಗದಲ್ಲಿ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಖಾದಿ ವಸ್ತುಗಳ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಸಮಾರಂಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಎಚ್.ಎಸ್., ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ನಾಗರಾಜ ಹವಾಲ್ದಾರ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ರಾಮಚಂದ್ರಪ್ಪ ಕೆ.ಬಿ., ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಶಾಸುಮೋದ್ದಿನ್, ಹೊಸಪೇಟೆ ತಹಸೀಲ್ದಾರರಾದ ಶೃತಿ ಎಂ.ಎಂ, ಶಾಲಾ ಶಿಕ್ಷಣ ಇಲಾಖೆಯ ವಿಷಯ ಪರಿವೀಕ್ಷಕರಾದ ಕವಿತಾ ದಿಗ್ಗಾಂವಿ, ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿ ಎನ್.ಜಿ. ಹುನಗುಂದ, ಪರಿಸರ ಪ್ರೇಮಿ ಡಾ.ಸಮದ್ ಕೊಟ್ಟೂರ, ವಿಜಯನಗರ ಕಾಲೇಜಿನ ಉಪನ್ಯಾಸಕಿ ರೇಣುಕ ಸೇರಿದಂತೆ ಇನ್ನಿತರರು ಇದ್ದರು.

ಸಚಿವರೊಂದಿಗೆ ಕೂಡ್ಲಿಗಿ ಶಾಸಕ ಡಾ.ಎನ್.ಟಿ. ಶ್ರೀನಿವಾಸ್, ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಹೆಚ್.ಎನ್.ಎಫ್ ಇಮಾಮ್ ನಿಯಾಜಿ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೋಂಗ್ಜಾಯ್ ಮೊಹಮದ್ ಅಲಿ ಅಕ್ರಮ್ ಶಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್., ಜಿಲ್ಲಾ ಉಸ್ತುವಾರಿ ಸಚಿವರ ಮಾಧ್ಯಮ ಸಲಹೆಗಾರ ಎಸ್.ಲಕ್ಷ್ಮಿನಾರಾಯಣ ಮಹಾತ್ಮ ಗಾಂಧೀಜಿಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಗೌರವಿಸಿದರು.

ಹೊಸಪೇಟೆ ಉಪ ವಿಭಾಗಾಧಿಕಾರಿ ವಿವೇಕಾನಂದ ಪಿ ಅವರು ಸ್ವಾಗತಿಸಿದರು. ಬಿಸಿಯೂಟ ಯೋಜನೆಯ ಜಿಲ್ಲಾ ಶಿಕ್ಷಣಾಧಿಕಾರಿ ಶೇಖರಪ್ಪ ಹೊರಪೇಟೆ ಅವರು ನಿರೂಪಿಸಿದರು. ಸಮಾರಂಭದಲ್ಲಿ ವಿಜಯನಗರ ಪದವಿ ಕಾಲೇಜ್, ಥಿಯೋಸಾಫಿಕಲ್ ಪದವಿ ಕಾಲೇಜು ಸೇರಿದಂತೆ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ವಾಹನ ಚಾಲಕ ಪಿ.ಕೃಷ್ಣಸ್ವಾಮಿ, ಹೊರಗುತ್ತಿಗೆ ನೌಕರರಾದ ಲಕ್ಷ್ಮಿ ಪೂಜಾರ, ತಾಯೇಶ ಜಿ., ಅಪ್ರಂಟಿಸ್ ತರಬೇತುದಾರ ಶಂಕರ ಸೇರಿದಂತೆ ಇತರರು ಇದ್ದರು.

